ಎಂದು ಸೂಚಿಸಿದ್ದು ಅಧಿಸೂಚನೆಯನ್ನು ಕೇಂದ್ರ ಸರ್ಕಾರವು ಇನ್ನೂ ಹೊರಡಿಸಿರುವುದಿಲ್ಲ.

ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಿದ ನಂತರ ರಾಜ್ಯ ಸರ್ಕಾರವು ನಿಯಮಗಳನ್ನು ರೂಪಿಸಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ರಚಿಸಲಾಗುವುದು ಹಾಗೂ ಇದರ ಅಡಿಯಲ್ಲಿ ಕಲ್ಯಾಣ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು, ಸಹಾಯ ಸವಲತ್ತುಗಳನ್ನು ಒದಗಿಸಲಾಗುವುದು.

ಆ ಹಾಗಿಲ್ಲದಿದ್ದಲ್ಲಿ, ಯಾವ ಯೋಜನೆಯಲ್ಲಿ ಇವರುಗಳಿಗೆ ಸಹಾಯ, ಸವಲತ್ತು ದೊರಕಿಸಲಾಗುವುದು;

ಉದ್ಭವಿಸುವುದಿಲ್ಲ

ಇ ಈ ಸಾಲಿನಲ್ಲಿಯೇ ಇದನ್ನು ಜಾರಿಗೊಳಿಸಲಾಗುವುದೇ?

ಕೇಂದ್ರ ಸರ್ಕಾರವು ಕಾಯ್ದೆಯನ್ನು ಜಾರಿಗೆ ತಂದು, ಅದರ ಅಡಿಯಲ್ಲಿ ನಿಯಮಗಳನ್ನು ರೂಪಿಸಿದ ತಕ್ಷಣವೇ ರಾಜ್ಯ ಸರ್ಕಾರವು ಕೂಡ ನಿಯಮಗಳನ್ನು ರಚಿಸಿ ಅದರ ಅಡಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.

32 ಶ್ರೀ ಯು.ಟಿ.ಖಾದರ್, ಎಂ.ಎಲ್.ಎ

ಪ್ರೊ.ಡಾ.ಮುಮ್ತಾಜ್(ಅಲಿ ಖಾನ್, ಹೆಚ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ ಸರ್ಕಾರದ ವತಿಯಿಂದ ಹೆಚ್ ಯಾತ್ರೆಗೆ ಹೋಗುವ ಯಾತ್ರಾರ್ಥಿಗಳಿಗೆ ಕೆಲವು ಜವಾಬ್ದಾರಿ ವ್ಯಕ್ತಿಗಳಿಂದ ಕಿರುಕುಳ ಉಂಟಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೆ?

2008–09ನೇ ಸಾಲಿನಲ್ಲಿ ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ ಈ ರೀತಿಯ ಪ್ರಕರಣಗಳಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

– ಉದ್ಭವಿಸುವುದಿಲ್ಲ –

ಇ ಇನ್ನು ಮುಂದೆ ಯಾವುದೇ ಯಾತ್ರಾರ್ಥಿಗಳಿಗೆ ತೊಂದರೆಯುಂಟಾಗದಂತೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

– ಉದ್ಭವಿಸುವುದಿಲ್ಲ –